ಸಂಪಾದಕೀಯ

# ಸತ್ಯಾನ್ವೇಷಣೆ

**ಸತ್ಯ** ಎಂದರೆ ಏನು? ಇದು ಅತ್ಯಂತ ಮೂಲಭೂತವಾದ ಪ್ರಶ್ನೆ ಮತ್ತು ಶಾಶ್ವತ ಪ್ರಶ್ನೆಯೂ ಕೂಡ. ಅನಾದಿ ಕಾಲದಿಂದಲೂ ಈ ಪ್ರಶ್ನೆಯನ್ನು ಕೇಳಲಾಗುತ್ತಿದೆ. ಅಸಂಖ್ಯ ಸಂತರು, ಚಿಂತಕರು, ತತ್ತ್ವಜ್ಞಾನಿಗಳು ಈ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವರು. ಆದರೂ ಇಂದಿಗೂ ಈ ಪ್ರಶ್ನೆ ಮೊದಲಿನಷ್ಟೇ ವಿನೂತನವಾಗಿದೆ. ಈ ಮೂಲಭೂತ ಪ್ರಶ್ನೆಯೇ ಮಾನವನನ್ನು ಮನುಷ್ಯತ್ವಕ್ಕೆ ಏರಿಸುವುದು ಮತ್ತು ಇದಕ್ಕೆ ದೊರೆಯುವ ಆತ್ಯಂತಿಕ ಉತ್ತರವೇ ಅವನನ್ನು ದೇವಮಾನವನನ್ನಾಗಿ ಪರಿವರ್ತಿಸುವುದು. ಎಲ್ಲರ ಮನಸ್ಸಿನಾಳದಲ್ಲೂ ಈ ಪ್ರಶ್ನೆ ಸುಪ್ತವಾಗಿ ಅಡಗಿರುತ್ತದೆ. ಅನೇಕರು ತಮ್ಮ ದಿನನಿತ್ಯದ ಆಗುಹೋಗುಗಳ ಗದ್ದಲದಲ್ಲಿ ಈ ಪ್ರಶ್ನೆಯ ಧ್ವನಿಯನ್ನು ಕೇಳಲಾರರು. ಕೆಲವೊಮ್ಮೆ ಅದು ತಲೆ ಎತ್ತುತ್ತದೆ. ಆದರೆ ಮತ್ತೆ ಅದು ಉಡುಗಿಹೋಗುತ್ತದೆ. ಬಹುತೇಕ ಜನರ ಜೀವನ ಯಾವ ರೀತಿ ಇರುತ್ತದೆಂದರೆ ಇಂತಹ ಪ್ರಶ್ನೆಗಳೇ ಲಕ್ಷ್ಯರಿ ಎನ್ನುವಂತಿರುತ್ತದೆ.

### ಜೀವನ ಸತ್ಯವನ್ನು ಆಧರಿಸಿದೆ

ಎಲ್ಲರೂ ಬಾಳುವುದು ಸತ್ಯದ ಆಧಾರದ ಮೇಲೆಯೇ. ನಮ್ಮ ಜೀವನ, ನಮ್ಮ ಸುತ್ತಲಿನ ವಸ್ತುಗಳು, ನಮ್ಮ ಅನುಭವಗಳು ಎಲ್ಲವೂ ನಮ್ಮ ಪಾಲಿಗೆ ಸತ್ಯವೆ. ಆದ್ದರಿಂದಲೇ ನಮ್ಮ ಬಾಳು ಸುಗಮವಾಗಿ ಸಾಗುತ್ತದೆ. ಯಾರೂ ಮಿಥ್ಯಾಲೋಕದಲ್ಲಿ, ಭ್ರಮಾಲೋಕದಲ್ಲಿ ಬಾಳಲಾರರು. ಅವರು ಭ್ರಮಾಲೋಕದಲ್ಲಿದ್ದರೂ ಅದನ್ನು ಸತ್ಯವೆಂದೇ ತಿಳಿದು ಅವರು ಬದುಕುತ್ತಾರೆ. ಒಂದು ಮಗುವು ತಾಯಿಯ ಗರ್ಭದಿಂದ ಹೊರಬಂದ ಕೂಡಲೇ ಈ ಜಗತ್ತು ಅದಕ್ಕೆ ಅತ್ಯಂತ ಹೊಸತಾಗಿರುತ್ತದೆ. ಇದರ ಸತ್ಯಾಸತ್ಯತೆಯ ಅರಿವು ಅದಕ್ಕಿನ್ನೂ ಉಂಟಾಗಿರುವುದಿಲ್ಲ. ಅದಕ್ಕಾಗಿಯೇ ಅದು ಹತಾಶ ಮನೋಭಾವದಿಂದ ಅಳಲು ಪ್ರಾರಂಭಿಸುತ್ತದೆ. ಕ್ರಮೇಣ ಅದಕ್ಕೆ ಸುತ್ತಲಿನ ಜಗತ್ತಿನ ಸತ್ಯತೆಯ ಅರಿವಾಗಿ ಅದಕ್ಕೆ ಭರವಸೆ ಉಂಟಾಗುತ್ತದೆ. ಆದ್ದರಿಂದ ಸತ್ಯವೇ ಭರವಸೆಯನ್ನು ನೀಡುವುದು. ಒಬ್ಬ ವ್ಯಕ್ತಿಯು ತಾನು ಯಾವುದೋ ಪ್ರಪಂಚದಲ್ಲಿರುವಂತೆ ಕನಸು ಕಾಣುತ್ತಾನೆ. ಆ ಕನಸು ಅವನ ಮೇಲೆ ತುಂಬ ಪ್ರಭಾವವನ್ನು ಉಂಟುಮಾಡಿರುತ್ತದೆ. ಕನಸಿನಿಂದ ಎದ್ದಮೇಲೆ ಜಾಗ್ರತ್ ಪ್ರಪಂಚ ಅವನಿಗೆ ಭ್ರಮೆಯಾಗಿ ಕಾಣುತ್ತದೆ. ತಾನೆಲ್ಲೋ ಇರುವಂತೆ ಅವನಿಗೆ ಭಾಸವಾಗುತ್ತದೆ, ಗಾಬರಿಯಾಗುತ್ತದೆ. ತನ್ನ ಹಾಸಿಗೆ, ಮಂಚ, ಮೇಜು ಮುಂತಾದುವುಗಳನ್ನೆಲ್ಲ ಮುಟ್ಟಿ ನೋಡಿಕೊಂಡು ಇದೆಲ್ಲ ಸತ್ಯ ಎಂದು ತಿಳಿದಮೇಲೆ ಅವನಿಗೆ ಭರವಸೆ ಉಂಟಾಗುತ್ತದೆ.

ನಮ್ಮ ಸ್ನೇಹಿತ ಮತ್ತು ನಿಕಟಪರಿಚಿತನ ವಿಷಯದಲ್ಲಿ ನಮಗೆ ಭರವಸೆ ಇರುತ್ತದೆ. ಏಕೆಂದರೆ ಅವನ ಮಾತು ಮತ್ತು ಕೃತಿ ನಮ್ಮ ಪಾಲಿಗೆ ಯಥಾರ್ಥವಾಗಿರುತ್ತದೆ. ಯಾರ ಮಾತಿನ ಸತ್ಯತೆಯ ವಿಷಯದಲ್ಲಿ ನಮಗೆ ಸಂದೇಹವಿರುತ್ತದೊ ಅವನ ಸ್ನೇಹವನ್ನು ಮಾಡಿಕೊಳ್ಳುವುದೇ ಇಲ್ಲ. ಅವನನ್ನು ದೂರದಿಂದ ಪ್ರೀತಿಸಬಹುದು. ಆದ್ದರಿಂದ ಮಾನವೀಯ ನಿಕಟ ಸಂಬಂಧಗಳೆಲ್ಲ ನಿಂತಿರುವುದು ಸತ್ಯದ ಆಧಾರದ ಮೇಲೆ. ಈ ಸಂಬಂಧ ಹೆಚ್ಚು ಹೆಚ್ಚು ಗಾಢವಾಗುವುದು ಮತ್ತು ಹೆಚ್ಚು ಹೆಚ್ಚು ವಿಸ್ತಾರವಾಗುವುದು ಈ ಸತ್ಯದ ಆಧಾರದ ಮೇಲೆಯೇ. ಇಲ್ಲಿ, ಪ್ರೀತಿ ಪರಸ್ಪರ ನಿಕಟತೆಗೆ ಕಾರಣವಲ್ಲವೆ ಎಂದು ಕೇಳಬಹುದು. ಆದರೆ ಈ ಪ್ರೀತಿಯೂ ಸತ್ಯವನ್ನೇ ಆಶ್ರಯಿಸಿರುತ್ತದೆ. ಎಲ್ಲಿ ಸತ್ಯವಿರುತ್ತದೊ, ಯಾವ ವ್ಯಕ್ತಿಯು ಸತ್ಯವಂತನಾಗಿರುತ್ತಾನೊ ಅಲ್ಲಿ ಪ್ರೀತಿಯೂ ಇರುತ್ತದೆ, ಮತ್ತು ಆ ವ್ಯಕ್ತಿಯೊಡನೆ ಪ್ರೀತಿಯೂ ಗಾಢವಾಗುತ್ತದೆ.

> *ಸತ್ಯವಿಲ್ಲದಿದ್ದರೆ ಈ ಜೀವನದ ಪ್ರಯೋಜನವೇನು?*
> — ಸ್ವಾಮಿ ವಿವೇಕಾನಂದ

### ಸತ್ಯದ ಬಗ್ಗೆ ವಿವಿಧ ಅಭಿಪ್ರಾಯಗಳು

ಯಾವುದು ಸತ್ಯ? ಸತ್ಯವೆಂಬುದು ಯಾವುದೂ ಇಲ್ಲವೇ ಇಲ್ಲ, ಎಲ್ಲ ಶೂನ್ಯ ಎನ್ನುವವರಿದ್ದಾರೆ. ನಮ್ಮ ಮುಂದಿರುವ ಭೌತ ಪ್ರಪಂಚವೇ ಸತ್ಯ, ಚೈತನ್ಯ ಎಂಬುದು ಭೌತವಸ್ತುವಿನ ಉತ್ಪನ್ನ (epiphenomena) ಎನ್ನುತ್ತಾರೆ ಭೌತಸತ್ತಾವಾದಿಗಳು. ಈ ದೃಶ್ಯಪ್ರಪಂಚ ಮಿಥ್ಯ, ದೇವರೊಬ್ಬನೇ ಸತ್ಯ ಎನ್ನುತ್ತಾರೆ ಅದ್ವೈತವಾದಿಗಳು. ಕೆಲವರು ನಮ್ಮ ಅನುಭವಕ್ಕೆ ಬರುವುದು ಮಾತ್ರ ಸತ್ಯ ಎನ್ನುತ್ತಾರೆ (empiricists). ಇನ್ನು ಕೆಲವರು ಹೇಳುತ್ತಾರೆ, ನೋಡುವ ಮನಸ್ಸಿಗಿಂತ ಬೇರೆಯಾದ, ಸ್ವತಂತ್ರವಾದ ಒಂದು ಸತ್ಯವು ಇಲ್ಲವೇ ಇಲ್ಲ ಎನ್ನುತ್ತಾರೆ (idealists). ಇದಕ್ಕೆ ವಿರುದ್ಧವಾಗಿ ಇನ್ನು ಕೆಲವರು ಹೇಳುತ್ತಾರೆ ನೋಡುವ ಮನಸ್ಸಿನಿಂದ ಸ್ವತಂತ್ರವಾದ ಬಾಹ್ಯ ಪ್ರಪಂಚವೊಂದಿದೆ ಎಂದು (realists). ಗುಣಗಳೇ ಸತ್ಯ, ಅವಕ್ಕಿಂತ ಬೇರೆಯಾದ ದ್ರವ್ಯವೆಂಬುದು ಇಲ್ಲವೇ ಇಲ್ಲ ಎನ್ನುವವರಿದ್ದಾರೆ, ಹಾಗೂ ದ್ರವ್ಯವೊಂದೇ ಇರುವುದು ಗುಣಗಳು ಇಲ್ಲವೇ ಇಲ್ಲ ಎಂದು ವಾದಿಸುವವರೂ ಇದ್ದಾರೆ. ಸತ್ಯವೆಂದರೆ ಅದು ನಿತ್ಯವೂ ಆಗಿರಬೇಕು, ಅನಿತ್ಯವಾದ ಸತ್ಯ ಇರಲಾರದು, ಅದು ಇದ್ದರೂ ಆತ್ಯಂತಿಕವಲ್ಲ ಎಂದು ವಾದಿಸುವ ವೇದಾಂತಿಗಳು ಒಂದು ಕಡೆಯಾದರೆ, ನಿತ್ಯ ಸತ್ಯವೂ ಇದೆ, ಅನಿತ್ಯ ಸತ್ಯವೂ ಇದೆ, ಇವೆರಡೂ ಆತ್ಯಂತಿಕವೇ ಎಂದು ಪ್ರತಿಪಾದಿಸುವ ವೇದಾಂತಿಗಳೂ ಇದ್ದಾರೆ. ಹೀಗೆ ಸತ್ಯವನ್ನು

ಕುರಿತಾದ ಅನೇಕಾನೇಕ ಸಿದ್ಧಾಂತಗಳಿವೆ. ಈ ಎಲ್ಲ ಗೊಂದಲಗಳು ಬೇತವೇ ಬೇತ ಎಂದು ಸತ್ಯದ ಬಗ್ಗೆ ಏನನ್ನೂ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ, ಅದರ ಬಗ್ಗೆ ನಮ್ಮ ಹೇಳಿಕೆಗಳೆಲ್ಲ ಆಂಶಿಕ ಮತ್ತು ಸಾಪೇಕ್ಷ (ಸ್ಯಾದ್ವಾದ) ಎಂದು ಜೈನರು ತೀರ್ಮಾನಕ್ಕೆ ಬರುತ್ತಾರೆ.

## ತಾತ್ತ್ವಿಕ ದೃಷ್ಟಿಯ ಅವಶ್ಯಕತೆ

ಆದರೆ ಮಾನವನ ಮನಸ್ಸು ಸುಮ್ಮನಿರಲಾರದು. ವಿಚಾರ ಮಾಡುವುದೇ ಅದರ ಸ್ವಭಾವ. ಸತ್ಯವನ್ನು ಕುರಿತಾದ ವಿಚಾರ ಅಪ್ರಸ್ತುತವಾದುದು, ಅದರಿಂದ ಪ್ರಾಯೋಗಿಕ ಪ್ರಯೋಜನ ಯಾವುದೂ ಇಲ್ಲ, ಇದರ ಬದಲು ನಮ್ಮ ಪ್ರಸ್ತುತ ಸಮಸ್ಯೆಗಳ ಬಗ್ಗೆ ಚಿಂತಿಸುವುದು ಒಳಿತು ಎಂದು ವಾದಿಸುವವರಿದ್ದಾರೆ. ಆದರೆ ಕೇವಲ ಪ್ರಸ್ತುತ ಸಮಸ್ಯೆಗಳ ಚಿಂತನೆಯಿಂದಲೇ ನಾವು ಅವುಗಳನ್ನು ಬಗೆಹರಿಸಲಾಗುವುದಿಲ್ಲ, ನಾವು ಆ ಸಮಸ್ಯೆಗಳನ್ನು ಮೀರಿಹೋಗಬೇಕು. ಈ ರೀತಿಯ ಮೂಲಭೂತ ಸತ್ಯಗಳ ಕುರಿತ ವಿಚಾರವನ್ನು ಬಿಟ್ಟಿದ್ದರಿಂದಲೇ ನಾವು ಇಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇಂದಿನ ಅನೇಕ ಮಾನಸಿಕ ಸಮಸ್ಯೆಗಳಿಂದ ಮುಕ್ತವಾಗಲು ನಾವು ವಿಚಾರಬುದ್ಧಿಯನ್ನು ಬೆಳಸಿಕೊಳ್ಳುವುದು ಆವಶ್ಯಕ. ನಾವು ಸತ್ಯ ಎಂದರೇನು ಎಂಬುದನ್ನು ಅರಿಯಲಾಗದೇ ಇರಬಹುದು, ಆದರೆ ಅದನ್ನು ಕುರಿತು ವಿಚಾರಮಾಡುವ ಮಾನಸಿಕ ಶಿಸ್ತನ್ನು ಬೆಳೆಸಿಕೊಳ್ಳುವುದು ಆವಶ್ಯಕ. ತಾತ್ತ್ವಿಕ ಚಿಂತನೆ ನಮ್ಮಲ್ಲಿ ತಾತ್ತ್ವಿಕ ದೃಷ್ಟಿಕೋನವನ್ನು ರೂಢಿಸುತ್ತದೆ ಮತ್ತು ಜೀವನದ ಘಟನೆಗಳನ್ನು ತಾತ್ತ್ವಿಕ ಮನೋಭಾವದಿಂದ ನೋಡುವ ಸ್ವಭಾವ ನಮ್ಮಲ್ಲುಂಟಾಗುತ್ತದೆ. ಇದರಿಂದಾಗಿ ಜೀವನದ ದುರ್ಘಟನೆಗಳು ನಮ್ಮ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುವುದಿಲ್ಲ.

> **ಮಾನವ ಸತ್ಯವನ್ನು ಬಯಸುತ್ತಾನೆ,**
> **ತಾನೇ ಅದನ್ನು**
> **ಅನುಭವಿಸಲು ಇಚ್ಛಿಸುತ್ತಾನೆ.**
>
> *—ಸ್ವಾಮಿ ವಿವೇಕಾನಂದ*

## ವಿಷಯ ವಿಶ್ಲೇಷಣೆ

ನಮ್ಮ ಮುಂದೆ ಒಂದು ಮರದ ಮೇಜು ಇದೆ. ಅದಕ್ಕೆ ಒಂದು ಆಕೃತಿ ಇದೆ, ಒಂದು ರೀತಿಯ ವಾಸನೆ ಇದೆ, ಅದು ಮುಟ್ಟಲು ಕಠಿಣವಾಗಿದೆ, ಹೊಡೆದರೆ ಶಬ್ದ ಬರುತ್ತದೆ. ಈ ಗುಣಗಳೆಲ್ಲೆಲ್ಲ ಮುಖ್ಯವಾದುದು ಅದರ ಆಕಾರ ಅಥವಾ ರೂಪ. ಈ ರೂಪದಿಂದಾಗಿಯೇ ಅದನ್ನು ನಾವು ಮೇಜು ಎಂದು ಕರೆಯುವುದು. ಈ ರೂಪವನ್ನು ತೆಗೆದು ಬಿಟ್ಟರೆ ಉಳಿಯುವುದು ಕೇವಲ ಮರ ಮಾತ್ರ. ಅಂದರೆ ಮೇಜಿಗೆ ನಿಜವಾದ ಅಸ್ತಿತ್ವವಿಲ್ಲ. ಮರದ ದೃಷ್ಟಿಯಿಂದ ಮೇಜು ಮಿಥ್ಯವೆಂದೇ ಹೇಳಬಹುದು. ಈಗ ಮರವನ್ನು ತೆಗೆದುಕೊಂಡರೆ ಅದಕ್ಕೂ ರೂಪ, ವಾಸನೆ, ಸ್ಪರ್ಶ ಗುಣ ಮುಂತಾದವುಗಳಿವೆ. ಅದರ ಆಕಾರವನ್ನು ತೆಗೆದು ಅದನ್ನು ಮೂಲ ದ್ರವ್ಯವಸ್ತುಗಳಿಗೆ ಇಳಿಸಬಹುದು. ಆದ್ದರಿಂದ ಆ ಮರಕ್ಕೂ ನಿಜವಾದ ಅಸ್ತಿತ್ವವಿಲ್ಲ. ಮುಂದೆ ಆ ದ್ರವ್ಯವಸ್ತುಗಳನ್ನೂ ವಿಶ್ಲೇಷಿಸಿದರೆ ಪರಮಾಣುವಿನ ರೂಪಕ್ಕೆ ಇಳಿಯುತ್ತವೆ. ಆದ್ದರಿಂದ ಆ ದ್ರವ್ಯವಸ್ತುಗಳಿಗೂ ನಿಜವಾದ ಅಸ್ತಿತ್ವವಿಲ್ಲ. ಪರಮಾಣುಗಳನ್ನೂ ಶಕ್ತಿಕಣಗಳಾಗಿ ವಿಭಾಗಿಸಬಹುದು. ಹೀಗೆ ಮುಂದುವರಿದರೆ ಉಳಿಯುವುದು ಒಂದೇ ಒಂದು ವಸ್ತು. ಆ ವಸ್ತುವನ್ನೇ ಮೂಲ ಸತ್ಯ ಎಂದು ಕರೆಯಬಹುದು. ನಮಗೆ ಕಾಣಿಸುವುದೆಲ್ಲವೂ ಅದರ ಅಭಿವ್ಯಕ್ತಿಗಳು. ಆದರೆ ಅದು ವಿವಿಧ ರೂಪಗಳಾಗಿ ಪರಿವರ್ತನೆಗೊಂಡಿದೆ ಎಂದಲ್ಲ, ಅದು ನಮಗೆ ವಿವಿಧ ರೂಪಗಳಾಗಿ ತೋರಿಕೊಳ್ಳುತ್ತಿದೆ.

## ಚೈತನ್ಯವೇ ಮೂಲ ಸತ್ಯ

ಆ ಮೂಲ ವಸ್ತು ಯಾವುದು? ಅದು ದೇವರು ಅಥವಾ ಚೈತನ್ಯವೇ(spirit) ಅಥವಾ ಸೂಕ್ಷ್ಮಭೂತವೇ (matter)? ಸೂಕ್ಷ್ಮಭೂತವೆಂದರೆ ಜಡವಸ್ತು. ಜಡವಸ್ತು ತನ್ನ ಬಗ್ಗೆ ಚಿಂತಿಸಲಾರದು, ಜಗತ್ತಿನ ಮೂಲ ಸತ್ಯ ಯಾವುದು ಎಂದು ವಿಚಾರ ಮಾಡಲಾರದು. ಈ ಅರಿವು ಚೈತನ್ಯದ ಲಕ್ಷಣ. ಹಾಗಾದರೆ ಮೂಲ ಜಡವಸ್ತುವಿನ ಜೊತೆಗೆ ಚೈತನ್ಯ ಎಂಬ ಇನ್ನೊಂದು ಸತ್ಯವಿದೆಯೇ? ಇದ್ದರೆ ಅದಕ್ಕೂ ಜಡಕ್ಕೂ ಸಂಬಂಧವೇನು? ಅದು ಜಡದಿಂದ ಸಂಪೂರ್ಣ ಪ್ರತ್ಯೇಕವಾಗಿ ಇರಲಾರದು. ಹಾಗಿದ್ದಿದ್ದರೆ ಈ ಮೂಲ ಸತ್ಯದ ಬಗ್ಗೆ ಪ್ರಶ್ನೆಯೇ ಏಳುತ್ತಿರಲಿಲ್ಲ. ಆದರೆ ಒಂದರೊಡನೆ ಒಂದು ಬೆರೆಯಲೂ ಆರವು, ಏಕೆಂದರೆ ಬೆರಕೆ ಮಿಶ್ರಣ ಮುಂತಾದ ಭಾವನೆಗಳು ಕೇವಲ ಭೌತವಸ್ತುಗಳಿಗೆ ಮಾತ್ರ ಸೀಮಿತವಾದುವು. ಚೈತನ್ಯದಿಂದ ಜಡ ಹುಟ್ಟಿದೆ ಎಂದೂ ಹೇಳಲಾರೆವು, ಜಡದಿಂದ ಚೈತನ್ಯ ಹುಟ್ಟಿದೆ ಎಂದೂ ಹೇಳಲಾರೆವು. ಇವೆರಡರ ನಡುವೆ ಕಾರ್ಯಕಾರಣ ಸಂಬಂಧ ಸಾಧ್ಯವೇ ಇಲ್ಲ. ಆದ್ದರಿಂದ ಒಂದೋ ಚೈತನ್ಯವಿದೆ ಇಲ್ಲವೇ ಜಡವಿದೆ ಎಂದು ಹೇಳಬೇಕಾಗುತ್ತದೆ.

ಜಡವು ಮಾತ್ರ ಸತ್ಯ ಎಂದು ಹೇಳಿದರೆ ಚೈತನ್ಯ ಎಲ್ಲಿಂದ ಬಂತು ಎಂಬ ಪ್ರಶ್ನೆ ಬಗೆಹರಿಯದೆ ಉಳಿಯುತ್ತದೆ. ಚೈತನ್ಯವೊಂದೆ ಸತ್ಯ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹಾಗಾದರೆ ಈ ಜಡಪ್ರಪಂಚ ಎಲ್ಲಿಂದ ಬಂತು? ಈ ದೃಶ್ಯಪ್ರಪಂಚ ನಾಮರೂಪಾತ್ಮಕವಾದುದು ಮತ್ತು ಈ ನಾಮರೂಪಗಳನ್ನು ವಿಶ್ಲೇಷಿಸುತ್ತ ಹೋದರೆ ಅವು ಕರಗಿಹೋಗುತ್ತವೆ, ಅವು ಕೇವಲ ತೋರಿಕೆ ಮಾತ್ರ, ಉಳಿಯುವುದು ಮೂಲವಸ್ತುವೊಂದೇ ಎಂಬುದನ್ನು ನಾವು ಮೊದಲೇ ನೋಡಿದೆವು. ಆದ್ದರಿಂದ ಆ ಮೂಲ ವಸ್ತು ಚೈತನ್ಯವೇ ಆಗಿರಬೇಕು. ಇಲ್ಲದಿದ್ದರೆ ಚೈತನ್ಯವನ್ನು ವಿವರಿಸಲಾರೆವು. ಅದು ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಈ ದೃಶ್ಯಪ್ರಪಂಚ ಆ ಚೈತನ್ಯದ ಅಭಿವ್ಯಕ್ತಿ ಎಂದು ಹೇಳ

ಬೇಕಾಗುತ್ತದೆ. ಶ್ರೀರಾಮಕೃಷ್ಣರು ಎಲ್ಲವನ್ನೂ ಚೈತನ್ಯಾತ್ಮಕವಾಗಿ ಕಾಣುತ್ತಿದ್ದರು.

## ಸತ್ಯದ ಸ್ವರೂಪ

ಈ ಸತ್ಯದ ಸ್ವರೂಪವೇನು? ಅದರ ಲಕ್ಷಣಗಳೇನು? ಇದರ ಬಗ್ಗೆ ನಾವೇನೂ ಹೇಳಲಾಗುವುದಿಲ್ಲ. ಏನು ಹೇಳಿದರೂ ಅದು ಸತ್ಯವನ್ನು ಕುರಿತಾದ ನಮ್ಮ ಅಭಿಪ್ರಾಯವಾಗುತ್ತದೆ ಮತ್ತು ಆ ಅಭಿಪ್ರಾಯ ಸತ್ಯವಲ್ಲ. ಅದಕ್ಕೇ ಶ್ರೀರಾಮಕೃಷ್ಣರು, "ಭಗವದ್ವಸ್ತುವೊಂದೇ ಇದುವರೆಗೂ ಎಂಜಲಾಗದೆ ಉಳಿದಿರುವುದು. ಮತ್ತೆಲ್ಲವೂ ಮಾನವನ ಬಾಯಿಯ ಮೂಲಕ ಹೇಳಲ್ಪಟ್ಟು ಎಂಜಲಾಗಿವೆ. ಆದರೆ ಭಗವಂತನ ಬಗ್ಗೆ ಇದುವರೆಗೆ ಯಾರಿಗೂ ಏನೂ ಹೇಳಲಾಗಿಲ್ಲ," ಎನ್ನುತ್ತಿದ್ದರು. ಇದು ಅನುಭವದ ವಿಷಯ ಮತ್ತು ಈ ಅನುಭವವನ್ನು ಮಾತಿನ ಮೂಲಕ ವಿವರಿಸಲಾಗುವುದಿಲ್ಲ."ವ್ಯಕ್ತಪಡಿಸಬಹುದಾದ ದೇವರು ಶಾಶ್ವತ ದೇವರಲ್ಲ (The Tao that can be expressed is not the eternal Tao)" ಎಂದು ಲಾಓ ಟ್ಸು (Lao Tsu) ಎಂಬ ಚೀನಾದ ತತ್ತ್ವಜ್ಞಾನಿ ಹೇಳುತ್ತಾನೆ.

> **ದೇವರ ಬಗ್ಗೆ ಏಕೆ ಅಷ್ಟೊಂದು ಮಾತನಾಡುವೆ ? ನೀನು ಅವನ ಬಗ್ಗೆ ಹೇಳುವುದೆಲ್ಲ ಅಸತ್ಯ.**
>
> —ಮೆಯ್‌ಸ್ಟರ್ ಎಖಾರ್ಟ್ (Meister Eckhart)

ಒಬ್ಬ ಅನುಭಾವಿಯು ತನ್ನ ತಪಸ್ಸನ್ನು ಮುಗಿಸಿ ಊರಿಗೆ ಹಿಂದಿರುಗುತ್ತಾನೆ. "ಹೇಳಿ, ದೇವರು ಹೇಗಿದ್ದಾನೆ?" ಎಂದು ಜನರು ಕೇಳಿದರು. ಆ ಅನುಭಾವಿಯು ತಾನು ಅನುಭವಿಸಿದುದನ್ನು ಹೇಳುವುದಾದರೂ ಹೇಗೆ? ದೇವರನ್ನು ಮಾತಿನ ಮೂಲಕ ವಿವರಿಸಲಾಗುವುದೆ? ಆದರೆ ಜನ ಬಿಡಬೇಕಲ್ಲ! ಮತ್ತೆ ಮತ್ತೆ ಅವನನ್ನು ಪೀಡಿಸಿದರು, "ನಮಗೆ ಏನಾದರೂ ಹೇಳಿ" ಎಂದು. ಅವರ ತೀವ್ರ ಆಸಕ್ತಿಯನ್ನು ಕಂಡು ಅವನು ಒಂದು ಸೂತ್ರ ರೂಪದಲ್ಲಿ ತನ್ನ ಅನುಭವವನ್ನು ಹೇಳಿದನು. ಅನುಭಾವಿಗೆ ಗೊತ್ತಿತ್ತು ತಾನು ಹೇಳುತ್ತಿರುವುದು ಅಸಮರ್ಪಕ, ತಾನು ಹೇಳುತ್ತಿರುವ ಸೂತ್ರ ನಿಜವಾಗಿಯೂ ತನ್ನ ಅನುಭವವನ್ನು ಪ್ರತಿನಿಧಿಸಲಾರದು ಎಂದು. ಆದರೂ ಅವರಲ್ಲಿ ಯಾರಾದರೂ ಆ ಸೂತ್ರದ ಸಹಾಯದಿಂದ ಸತ್ಯವನ್ನು ಅರಿಯಲು ಪ್ರಯತ್ನಿಸಬಹುದು ಎಂಬ ಭರವಸೆಯಿಂದ ಆ ಸೂತ್ರವನ್ನು ನೀಡಿದ್ದನು. ಜನರು ಆ ಸೂತ್ರವನ್ನು ತೆಗೆದುಕೊಂಡರು. ಕೆಲವರು ಅದರ ಮೇಲೆ ದೊಡ್ಡ ದೊಡ್ಡ ವ್ಯಾಖ್ಯಾನಗಳನ್ನು ಬರೆದರು. ಮತ್ತೆ ಕೆಲವರು ಅದರ ಮೇಲೆ ಉಪನ್ಯಾಸಗಳ ಮೇಲೆ ಉಪನ್ಯಾಸಗಳನ್ನು ನೀಡಿದರು. ಅದೊಂದು ಪವಿತ್ರ ನಂಬಿಕೆ ಎಂದು ಇತರರ ಮೇಲೆ ಅದನ್ನು ಬಲಾತ್ಕಾರವಾಗಿ ಹೇರಿದರು. ಈ ನಂಬಿಕೆಯನ್ನು ಹರಡಲು ವಿದೇಶಗಳಿಗೆಲ್ಲ ಹೋದರು. ಅನೇಕರು ಈ ನಂಬಿಕೆಗಾಗಿ ಪ್ರಾಣವನ್ನೂ ತೆತ್ತರು. ಆದರೆ ಯಾರೂ ಸತ್ಯಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಲಿಲ್ಲ. ಆಗ ಆ ಅನುಭಾವಿಯು ಆಲೋಚಿಸಿದ, "ನಾನು ಸುಮ್ಮನೆ ಇದ್ದಿದ್ದರೆ ಚೆನ್ನಾಗಿತ್ತು" ಎಂದು [ಅಂಥೋಣಿ ಡಿ ಮೆಲ್ಲೊ (Anthony De Mello) ಅವರ *The Song of the Bird* ಗ್ರಂಥದಿಂದ].

## ಮತದಿಂದ ಸತ್ಯದ ಮರೆ

ಸತ್ಯದ ಬಗೆಗಿನ ನಮ್ಮ ಅಭಿಪ್ರಾಯವೇ ಸತ್ಯವನ್ನು ಪಡೆಯಲು ನಮಗೆ ತಡೆಯಾಗಿರುವುದು. ಓರ್ವ ಬೌದ್ಧ ಸಂನ್ಯಾಸಿ ಹೇಳುವಂತೆ, "ಸತ್ಯದ ಬಗೆಗಿನ ನಮ್ಮ ಅಭಿಪ್ರಾಯವನ್ನು ನಾವು ಬಿಟ್ಟುಕೊಡಲು ಸಿದ್ಧರಾದರೆ ಸತ್ಯವು ತಾನಾಗಿಯೇ ತೋರಿಕೊಳ್ಳುತ್ತದೆ." ಆದ್ದರಿಂದ ನಾವು ಸ್ವತಂತ್ರವಾಗಿ, ಏಕಾಕಿಯಾಗಿ ಸತ್ಯವನ್ನು ಅರಸಬೇಕು. "ಸತ್ಯವು ಹೀಗಿದೆ" ಎಂದು ಮೊದಲೇ ತೀರ್ಮಾನಿಸಿಕೊಂಡು ಹೊರಟರೆ ನಮಗೆ ಸತ್ಯ ದೊರೆಯುವುದಿಲ್ಲ.

> **ಸತ್ಯ ಒಂದು ಅನರ್ಘ್ಯ ರತ್ನವಿದ್ದಂತೆ. ಅದಕ್ಕೆ ಬಣ್ಣ ಬಳಿಯಕೂಡದು. ಬದಲು ಅದನ್ನು ಎಲ್ಲರ ಪ್ರಯೋಜನಕ್ಕಾಗಿ ಹಗಲು ಬೆಳಕಿನಲ್ಲಿ ತೆರೆದಿಡಬೇಕು.**
>
> — ಜಾರ್ಜ್ ಸಾಂತಾಯನ (George Santayana)

ಶ್ರೀರಾಮಕೃಷ್ಣರು "ಈ ವಿಗ್ರಹದಲ್ಲಿ ದೇವರಿದ್ದಾನೆ, ಅವನು ಹೀಗಿದ್ದಾನೆ, ಹಾಗಿದ್ದಾನೆ" ಎಂದು ಭಾವಿಸುತ್ತ ದೇವರನ್ನು ಅರಸಿಕೊಂಡು ಹೋಗಲಿಲ್ಲ. ಅವರು ಎಲ್ಲ ಅಭಿಪ್ರಾಯಗಳು ಮತ್ತು ಮತಗಳಿಂದ ಮುಕ್ತವಾಗಿ ದೇವರನ್ನು ಅರಸಿಕೊಂಡು ಹೊರಟರು. ಸ್ವಾಮಿ ವಿವೇಕಾನಂದರೂ ಕೂಡ ಯಾವುದಾದರೂ ಅಭಿಪ್ರಾಯಕ್ಕೆ ಬದ್ಧರಾಗಿದ್ದಿದ್ದರೆ ಅವರಲ್ಲಿ ಅಷ್ಟು ತೀವ್ರ ಭಗವದ್ ಹಂಬಲ ಉಂಟಾಗುತ್ತಿರಲಿಲ್ಲ. ಬುದ್ಧನೂ ಕೂಡ ಸ್ವತಂತ್ರವಾಗಿ ಸತ್ಯವನ್ನು ಅರಸುತ್ತ ಹೊರಟನು. ಎಲ್ಲ ಅನುಭಾವಿಗಳೂ ಹೀಗೇ ಮಾಡಿದುದು. ಉಪನಿಷತ್ತಿನಲ್ಲಿ ಶಿಷ್ಯನು ಗುರುವನ್ನು ಬ್ರಹ್ಮನ ಸ್ವರೂಪವನ್ನು ವಿಚಾರಿಸಿದಾಗ, "ನೀನೇ ಸಾಧನೆಯ ಮೂಲಕ ತಿಳಿದುಕೊ" (ತಪಸಾ ಬ್ರಹ್ಮ ವಿಜಿಜ್ಞಾಸಸ್ವ,—ತೈತ್ತಿರೀಯ ಉಪನಿಷತ್, ೩.೨) ಎಂದು ಗುರು ಹೇಳುತ್ತಾನೆ.

ನಾವು ಇಂದ್ರಿಯಗಳ ಮೂಲಕ ಈ ದೃಶ್ಯಪ್ರಪಂಚವನ್ನು ನೋಡುತ್ತೇವೆ. ಈ ದೃಶ್ಯಪ್ರಪಂಚ ನಮಗೆ ನಿಜವಾಗಿ ಭಾಸವಾಗುತ್ತದೆ. ನಾವು ನಿಜವಾಗಿ ನೋಡುವುದು ಇಂದ್ರಿಯಗಳಿಗೆ ಸಂಬಂಧಿಸಿದ ಕೆಲವು ಗುಣಗಳನ್ನು. ಈ ಗುಣಗಳ ಹೊರತಾಗಿ ನಮಗೆ ಈ ಪ್ರಪಂಚದ ಬಗ್ಗೆ ಏನೂ ತಿಳಿಯದು. ಇದು ನಮ್ಮ ಸಾಮಾನ್ಯ ನೋಡುವಿಕೆಯಿಂದ ಹಿಡಿದು ವಿಜ್ಞಾನಿಗಳ ಸೂಕ್ಷ್ಮ ದರ್ಶನದವರೆಗೆ ಎಲ್ಲ ರೀತಿಯ ನೋಡುವಿಕೆಗೂ ಅನ್ವಯಿಸುತ್ತದೆ. ಅಂದರೆ ನಾವು ನೋಡುವುದು ಗುಣಗಳನ್ನು ಮಾತ್ರ, ಮೂಲ ದ್ರವ್ಯವನ್ನಲ್ಲ.

## ವಿಷಯಿ ವಿಶ್ಲೇಷಣೆ

ಈ ಗುಣಗಳನ್ನಾದರೂ ನೋಡುತ್ತಿರುವವರು ಯಾರು? ಇಂದ್ರಿಯಗಳೇ? ಮನಸ್ಸೇ? ಇಂದ್ರಿಯಗಳು ನೋಡುತ್ತಿವೆ ಎಂದರೆ ಕ್ಯಾಮರಾದ ಲೆನ್ಸ್ ವಸ್ತುವನ್ನು ನೋಡುತ್ತಿದೆ ಎಂದಂತಾಗುತ್ತದೆ. ಮನಸ್ಸು ನೋಡುತ್ತಿದೆ ಎಂದರೆ ಕ್ಯಾಮರಾದೊಳಗಿನ ಫಿಲ್ಮ್ ನೋಡುತ್ತಿದೆ ಎಂದಂತಾಗುತ್ತದೆ. ಇಲ್ಲಿ ನಿಜವಾಗಿ ನೋಡುತ್ತಿರುವ ಫೋಟೋಗ್ರಾಫರ್ ಯಾರು? ಅದೇ ಸಾಕ್ಷೀ ಚೈತನ್ಯ. ಇಂದ್ರಿಯ ಮನಸ್ಸುಗಳಲ್ಲಿ ನಡೆಯುವುದೆಲ್ಲ ಕ್ರಿಯೆಗಳು. ಈ ಕ್ರಿಯೆಗಳನ್ನು ನೋಡಲು ನಿಷ್ಕ್ರಿಯವಾದ ಇನ್ನೊಂದು ವಸ್ತು ಇರಬೇಕು—ನದೀ ನೀರಿನ ಪ್ರವಾಹವನ್ನು ದಡದಲ್ಲಿ ನಿಂತು ನೋಡುವಂತೆ. ಇಲ್ಲಿ ನೋಡುವುದು ಒಂದು ಕ್ರಿಯೆಯಲ್ಲ, ಭಾಷಾಮಿತಿಯಿಂದಾಗಿ ಕ್ರಿಯಾಪದವನ್ನು ಬಳಸುತ್ತೇವೆ ಅಷ್ಟೇ.

ಈ ಸಾಕ್ಷೀಚೈತನ್ಯ ನಾವು ಹಿಂದೆ ಪ್ರಸ್ತಾಪಿಸಿದ ಚೈತನ್ಯಕ್ಕಿಂತ ಬೇರೆಯಾಗಿರಲಾರದು. ಏಕೆಂದರೆ ಈ ಜಗತ್ತಿನ ಹಿಂದಿರುವ ಮೂಲವಸ್ತು ಒಂದೇ ಎಂಬುದನ್ನು ನಾವು ಮೊದಲೇ ನೋಡಿದ್ದೇವೆ. ಒಂದೇ ಚೈತನ್ಯ ವಿಷಯ ಮತ್ತು ವಿಷಯಿ ಎಂದು ವಿಭಾಗವಾಗಿದೆ—ನೀರಿನ ಮೇಲೆ ಗೆರೆ ಹಾಕಿ ಎರಡು ಭಾಗ ಮಾಡಿದಂತೆ. ಇದು ಹೇಗೆ ಉಂಟಾಯಿತು ಎಂಬುದು ಯಾರಿಗೂ ತಿಳಿಯದು. ಒಂದು ಸಮುದ್ರದ ಅಲೆ ಇನ್ನೊಂದು ಅಲೆಯನ್ನು ನೋಡುತ್ತಿರುವಂತೆ ನಾವು ಈ ದೃಶ್ಯಪ್ರಪಂಚವನ್ನು ನೋಡುತ್ತಿದ್ದೇವೆ. ಯಾವಾಗ ನೋಡುತ್ತಿರುವ ಅಲೆಯು ತಾನು ಬರಿ ನೀರು, ಈ ಅಲೆಯ ರೂಪ ಕೇವಲ ಮಿಥ್ಯ ಎಂದು ಅರಿಯುತ್ತದೆಯೊ ಆಗ ತಾನು ನೋಡುತ್ತಿರುವ ಅಲೆಯೂ ಕೇವಲ ನೀರೇ, ಅದರ ನಾಮ ರೂಪಗಳು ಮಿಥ್ಯ ಎಂದು ಅರಿಯುತ್ತದೆ.

## ಅಜ್ಞಾನದಿಂದ ವಿಷಯ—ವಿಷಯಿ ಭೇದ

ಈಗ ಅಲೆಗಳು ಹೇಗೆ ಉಂಟಾದುವು, ಈ ವಿಷಯ-ವಿಷಯೀ ಭೇದ ಹೇಗೆ ಉಂಟಾಯಿತು ಎಂಬುದೇ ಸಮಸ್ಯೆ. ಈ ಭೇದ ನಿಜವಾಗಿ ಉಂಟಾಗಿದ್ದರೆ ಚೈತನ್ಯವು ವಿಕಾರವುಳ್ಳದ್ದು ಎಂದಂತಾಗುತ್ತದೆ. ಅದು ವಿಕಾರವುಳ್ಳದ್ದಾದರೆ, ಅದೂ ಬದಲಾಗುತ್ತಿದ್ದರೆ, ಅದು ದೃಶ್ಯಪ್ರಪಂಚದಂತೆಯೇ ಒಂದು ವಸ್ತುವಾಗುತ್ತದೆ. ಆಗ ನಿಜವಾಗಿ "ನೋಡು"ವವನು ಯಾರೂ ಇರುವುದೇ ಇಲ್ಲ, ಏಕೆಂದರೆ ನೋಡುವ ವಸ್ತು ನಿಷ್ಕ್ರಿಯವಾಗಿರಬೇಕು, ನಿರ್ವಿಕಾರವಾಗಿರಬೇಕು, ಎಂಬುದನ್ನು ಮೊದಲೆ ನೋಡಿದ್ದೇವೆ. ಆದ್ದರಿಂದ ಚೈತನ್ಯದಲ್ಲಿ ನಿಜವಾದ ಭೇದವನ್ನು ನಾವ ಕಲ್ಪಿಸಲಾರೆವು. ಆದ್ದರಿಂದ ಈ ಭೇದ ಅಜ್ಞಾನಮೂಲವಾದುದು ಎಂದು ಹೇಳುತ್ತಾರೆ. ಈ ಅಜ್ಞಾನ ಎಲ್ಲಿಂದ ಬಂತು? ಅಜ್ಞಾನಕ್ಕೆ ಬರುವುದು ಹೋಗುವುದು ಎಂಬುದಿಲ್ಲ—ಏಕೆಂದರೆ ಅದೊಂದು ವಸ್ತುವಾಗಲಿ, ಶಕ್ತಿಯಾಗಲಿ ಅಲ್ಲ. ಅದು ನಮ್ಮ ನಿಜವಾದ ಸ್ವರೂಪದ ಮರೆವು ಅಷ್ಟೆ—ಆತ್ಮವಿಸ್ಮೃತಿ. ಈ ಆತ್ಮವಿಸ್ಮೃತಿ ಹೇಗೆ ಉಂಟಾಯಿತು? ದೃಶ್ಯ ಪ್ರಪಂಚವನ್ನು ನೋಡುತ್ತ ನಮಗೆ ಈ ಆತ್ಮವಿಸ್ಮೃತಿ ಉಂಟಾಯಿತೆ? ಅಥವಾ ಆತ್ಮವಿಸ್ಮೃತಿಯಿಂದಾಗಿ ಈ ದೃಶ್ಯ ಪ್ರಪಂಚವನ್ನು ನೋಡುತ್ತಿರುವೆವೆ? ಇದು ಬೀಜವೃಕ್ಷ ನ್ಯಾಯದಂತೆ ಬಗೆಹರಿಯದ ಸಮಸ್ಯೆ.

ಚೈತನ್ಯವು ತನ್ನ ಸ್ವರೂಪವನ್ನು ಮರೆತುಬಿಡುತ್ತದೆ ಎಂದಿಟ್ಟುಕೊಳ್ಳೋಣ. ಹೀಗೆ ಮರೆತು ಅದು ಅಜ್ಞಾನದ ಕತ್ತಲೆಯಲ್ಲಿ ಇರಬಹುದು. ಅಂದಮಾತ್ರಕ್ಕೆ ಅದು ದೃಶ್ಯಪ್ರಪಂಚವನ್ನು ನೋಡಬೇಕೆಂದಿಲ್ಲ. ಅದು ನೋಡುತ್ತಿರುವುದರಿಂದ ಅದು ಇರಲೇಬೇಕು. ಅದು ಇದ್ದರೆ ಚೈತನ್ಯವೇ ಆ ರೀತಿ ವಿಕಾರ ಗೊಂಡಿದೆ ಎಂದು ಹೇಳಲೇಬೇಕಾಗುತ್ತದೆ. ಮತ್ತೆ ಚೈತನ್ಯ ವಿಕಾರಾತ್ಮಕವಾಗುತ್ತದೆ. ಇದು ಸಾಧ್ಯವಿಲ್ಲ. ಆದ್ದರಿಂದ ದೃಶ್ಯಗಳೆಲ್ಲವೂ ಚೈತನ್ಯದ ಮೇಲೆ ಆದ ಮಿಥ್ಯಾರೋಪಣೆ ಎಂದು ಹೇಳಬೇಕಾಗುತ್ತದೆ.

## ವ್ಯಕ್ತಿತ್ವ ನಿರಸನ

ಮೋಡ ತನ್ನ ಪಾಡಿಗೆ ತಾನಿರುತ್ತದೆ. ನಾವು ಅದಕ್ಕೆ ಪರ್ವತದ ರೂಪವನ್ನೊ, ಮಾನವಮುಖದ ರೂಪವನ್ನೊ ಅಥವಾ ಇನ್ನಾವುದಾದರೂ ಪ್ರಾಣಿಯ ರೂಪವನ್ನೊ ಆರೋಪಿಸುತ್ತೇವೆ. ತನ್ನತನವನ್ನು(self-identity) ಕಳೆದುಕೊಂಡ ವ್ಯಕ್ತಿ ಏನೇನೊ ವಸ್ತುಗಳನ್ನು ನೋಡಬಹುದು, ಏನೇನೊ ಶಬ್ದಗಳನ್ನು ಕೇಳಬಹುದು. ಅವನಿಗೆ ಇಲ್ಲದುದು ಇದ್ದಂತೆಯೂ ಇದ್ದುದು ಇಲ್ಲದಂತೆಯೂ ಕಾಣಬಹುದು. ಹಾಗೆಯೇ ಆತ್ಮವಿಸ್ಮೃತಿಯ ದೆಸೆಯಿಂದ ಶುದ್ಧ ನಿರ್ವಿಕಾರ ಚೈತನ್ಯವೇ ದೃಶ್ಯಪ್ರಪಂಚವಾಗಿ ಕಾಣುತ್ತದೆ ಮತ್ತು ತಾನು ನೋಡುತ್ತಿರುವ ದೃಕ್ ಆಗುತ್ತದೆ. ಈ ದೃಕ್-ದೃಶ್ಯ ಭೇದವನ್ನು ಹೋಗಲಾಡಿಸಿ ವಿಶ್ವವ್ಯಾಪಿ ಅಖಂಡ ಚೈತನ್ಯದಲ್ಲಿ ನಮ್ಮ ವ್ಯಕ್ತಿಭಾವವನ್ನು ಕರಗಿಸುವುದೇ ಆಧ್ಯಾತ್ಮಿಕ ಜೀವನದ ಆತ್ಯಂತಿಕ ಗುರಿ.

ನಮ್ಮ ವ್ಯಾವಹಾರಿಕ ಜೀವನದಲ್ಲಿಯೂ ನಮ್ಮ ಎಲ್ಲ ಆಗುಹೋಗುಗಳ ಹಿಂದೆ ಈ ಅಖಂಡ ಚೈತನ್ಯದ ಕಲ್ಪನೆ ಇದ್ದರೆ ನಮ್ಮ ಸಂಕುಚಿತ ಮನೋಭಾವ, ಸ್ವಾರ್ಥಪರತೆ ಎಷ್ಟೊ ಕಡಮೆಯಾಗುತ್ತದೆ. ನಾವು ಭೌತವಸ್ತುವಿಗೆ ಅಂಟಿಕೊಂಡಷ್ಟೂ ನಮ್ಮಲ್ಲಿ ಭೇದಬುದ್ಧಿ ಅಧಿಕವಾಗುತ್ತದೆ. ಏಕೆಂದರೆ ಭೌತ ಜಗತ್ತಿನಲ್ಲಿ ನಾವು ಅಖಂಡತೆಯನ್ನು ಕಾಣಲಾರೆವು. ಈ ಭೇದ ಬುದ್ಧಿಯಿಂದಲೆ ಸ್ವಾರ್ಥಬುದ್ಧಿಯೂ ಉಂಟಾಗುತ್ತದೆ. ಅಖಂಡತೆಯ ಭಾವವನ್ನು ನಾವು ಬೆಳಸಿಕೊಳ್ಳಬೇಕು. ಈ ಅಖಂಡ ವಿಶ್ವದಲ್ಲಿ ನನ್ನ ವ್ಯಕ್ತಿತ್ವವೂ ಒಂದು ಅಂಶವಾಗಬೇಕು. ಆಗ ನಮ್ಮ ಜೀವನ ವಿಶ್ವಜೀವನದೊಡನೆ ಒಂದಾಗುತ್ತದೆ. ಆಗ ನಾವು ವ್ಯಕ್ತಿತ್ವದ ಗಡಿ, ಕೌಟುಂಬಿಕ ಗಡಿ, ಜನಾಂಗೀಯ ಗಡಿ, ಜಾತೀಯ ಗಡಿ, ಧರ್ಮದ ಗಡಿ, ರಾಷ್ಟ್ರೀಯ ಗಡಿ—ಹೀಗೆ ಎಲ್ಲ ಗಡಿಗಳನ್ನೂ ಮೀರಿ ಹೋಗುತ್ತೇವೆ. ಆಗ ಸ್ವಾಮಿ ವಿವೇಕಾನಂದರಂತೆ ನಾವು "ಗಡಿ ರಹಿತ ಮಾನವ(Man without frontiers)"ರಾಗುತ್ತೇವೆ.